ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| **ಸಿ.ಸಿ. ನಂ :-** | **970/2017** |
| ಸಿ.ಡಬ್ಲ್ಯೂ: -05 | ಪಿ.ಡಬ್ಲ್ಯೂ-04 |
| **ದಿನಾಂಕ :-** | **21.02.2026** |

| | |
|---|---|
| ಹೆಸರು | ಗುರುಮೂರ್ತಿ |
| ತಂದೆ/ತಾಯಿ/ ಗಂಡನ ಹೆಸರು | ಸಗಣಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ನಿರ್ವಾಹಕ |
| ವಾಸ | ಕಡೂರು |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಪ್ರಾಜ್ಞ ಸ. ಸ. ಅ ರವರಿಂದ

ಚಾಸಾ-1 ರಿಂದ 4 ಗೊತ್ತಿಲ್ಲ. ಆರೋಪಿ ಗೊತ್ತಿಲ್ಲ. ಮೃತ ಲಕ್ಷ್ಮೀನಾರಾಯಣ ರವರ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಮಾಹಿತಿ ಇಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಮಾನ್ಯ ಸ. ಸ. ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಹಾಗೂ ಪಾಟೀ ಸವಾಲಿಗೆ ಅವಕಾಶ ಕೋರಿದ್ದು, ಅವರ ಮನವಿ ಅಂಗೀಕರಿಸಿ ಪಾಟೀ ಸವಾಲಿಗೆ ಅವಕಾಶ ಮಾಡಿಕೊಡಲಾಗಿದೆ.)

ಪಾಟೀ ಸವಾಲುಃ ಪ್ರಾಜ್ಞ ಸ. ಸ. ಅ ರವರಿಂದ

ದಿನಾಂಕಃ 01.01.2017 ರಂದು ಬೆಳಿಗ್ಗೆ 05-45 ಗಂಟೆ ಸಮಯದಲ್ಲಿ ನಾನು ನಿರ್ವಾಹಕನಾಗಿ ಹಾಗೂ ಆರೋಪಿ ಚಾಲಕನಾಗಿ ಬಿಎಂಟಿಸಿ ಬಸ್ ಸಂಖ್ಯೆ ಕೆಎ-53 ಎಫ್-271 ರಲ್ಲಿ ಆನೇಕಲ್ ನಿಂದ ಚಂದಾಪುರ ರಸ್ತೆ ಮಾರ್ಗವಾಗಿ ಕೆಲಸ ನಿರ್ವಹಿಸುತ್ತಿದ್ದೇವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೃತ ಲಕ್ಷ್ಮೀನಾರಾಯಣ ರವರು ಕಾವಲಹೊಸಹಳ್ಳಿ ಜನತಾ ಕಾಲೋನಿ ಅರಿವಿನ ಮಂದಿರದ ಮುಂಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ ಬಸ್ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮೃತ ಲಕ್ಷ್ಮೀನಾರಾಯಣ ರವರಿಗೆ ಡಿಕ್ಕಿ ಪಡಿಸಿದರು ಎಂದರೆ ಸರಿಯಲ್ಲ. ಇದರ ಪರಿಣಾಮ ಅವರ ಕಾಲಿಗೆ ಮತ್ತು ತಲೆಗೆ ತೀವ್ರ ಸ್ವರೂಪದ

ಗಾಯವಾಯಿತು ಎಂದರೆ ಸರಿಯಲ್ಲ. ನಂತರ ಅವರನ್ನು ಸ್ಪರ್ಶ ಆಸ್ಪತ್ರೆಗೆ ದಾಖಲು ಮಾಡುವಷ್ಟರಲ್ಲಿ, ವೈದ್ಯರು ಮೃತಪಟ್ಟಿದ್ದಾರೆಂದು ತಿಳಿಸಿದರು ಎಂದರೆ ಸರಿಯಲ್ಲ. ಈ ಅಪಘಾತವನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. ನಂತರ ನಾನು ಪೊಲೀಸರಿಗೆ ಈಗ ಓದಿ ಹೇಳಿದಂತೆ ನಾನು ಚಿಕ್ಕಮಂಗಳದಲ್ಲಿರುವ ------------------- ಅಪಘಾತವಾಗಿದೆ ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಚಾರಗಳು ಗೊತ್ತಿದ್ದರು, ಈಗ ಆರೋಪಿಯೊಂದಿಗೆ ರಾಜೀ ಮಾಡಿಕೊಂಡು, ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲವೆಂದು ತಿಳಿಸಿದರು

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರನಿಗೆ ಓದಿ ಹೇಳಲಾಯಿತು)**

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು,
ಆನೇಕಲ್.